**<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).</u>**
**<u>ಎಸ್.ಸಿ. ನಂ. 5017/2022</u>**

**ಪ್ರಾಸಾ -- 9**

**ಚಾಸಾ –12**

ಸಾಕ್ಷಿಯ ಹೆಸರು – ವಿಕ್ರಮ್ ಪೊಣ್ಣಣ್ಣ

ತಂದೆಯ ಹೆಸರು – ಪೂಣಚ್ಚ

ವಯಸ್ಸು – 35 ವರ್ಷ

ವೃತ್ತಿ – ಖಾಸಗಿ ಕೆಲಸ

ವಿಳಾಸ – ಬೆಂಗಳೂರು

ದಿಃ 03.12.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>**

1. ನನಗೆ ವಿ ಬಾಡಗ ಗ್ರಾಮದಲ್ಲಿ ಕಾಫಿ ತೋಟ ಇದೆ. ಸದರಿ ಕಾಫಿ ತೋಟದಲ್ಲಿ ಲೈನ್ ಮನೆ ಇದೆ ಅದರಲ್ಲಿ 3 ಪೋರ್ಷನ್ ಗಳು ಇವೆ. 2 ವರ್ಷಗಳ ಹಿಂದೆ ನಮ್ಮ ಕಾಫಿ ತೋಟದ ಲೈನ್ ಮನೆಯಲ್ಲಿ ಚಿಮ್ಮಿ ಹಾಗೂ ಆಕೆಯ ಗಂಡ ಕುಳಿಯ ವಾಸವಾಗಿದ್ದರು. ನಾವು ಕಾಫಿ ತೋಟವನ್ನು ಖುದ್ದಾಗಿ ನೋಡಿಕೊಳ್ಳಲು ಸಾಧ್ಯವಿಲ್ಲದ ಕಾರಣ ಕಾಫಿ ತೋಟವನ್ನು ಚಾಸಾ 6 - ಕಡೆಮಾಡ ಅಜಿತ್ ರವರಿಗೆ ಲೀಜ್ ಗೆ ಕೊಟ್ಟಿದ್ದೆವು. ದಿಃ 02.03.2022 ರಂದು ನಾನು ನನ್ನ ತಂದೆಗೆ ಅನಾರೋಗ್ಯ ಆಗಿದ್ದ ಕಾರಣ ಅವರನ್ನು ಮೈಸೂರಿನ ಸೆಂಟ್ ಮೇರಿಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಮಾರನೇ ದಿನ ಕಾಫಿ ತೋಟಕ್ಕೆ ಪೈಪ್ ಗಳನ್ನು ಅಳವಡಿಸುವ ಸಲುವಾಗಿ ಅಜಿತ್, ಕುಳಿಯಾ ಹಾಗೂ ಇತರೆ ಕೆಲಸಗಾರರು ಹೋದಾಗ ಚಿಮ್ಮಿ ಲೈನ್ ಮನೆಯಲ್ಲಿ ಕಾಣಿಸಲಿಲ್ಲ ಆಕೆಯನ್ನು ಹುಡುಕಿಕೊಂಡು ಹೋದಾಗ ಲೈನ್ ಮನೆಯ ಹಿಂದೆ ಆಕೆ ಬಿದ್ದಿದ್ದು ಆಕೆಯ ಕತ್ತು ಕತ್ತರಿಸಿದ ಗಾಯ ರಕ್ತ ಸ್ರಾವ ಆಗುತ್ತಿದೆ ಎಂದು ನನಗೆ ಅಜಿತ್ ರವರ ಫೋನ್ ನಿಂದ ಚಿಮ್ಮಿಯ ಮಗಳು ಹೇಳಿದರು. ನಾನು ಚಿಮ್ಮಿಯನ್ನು ವಿರಾಜಪೇಟೆಯ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಆಕೆಗೆ ಹೇಳಿದೆ. ಅಲ್ಲಿ ತಡವಾದ ಕಾರಣ ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಬನ್ನಿ ಎಂದು ಚಿಮ್ಮಿಯ ಮಗಳ ಬಳಿ ಹೇಳಿರುತ್ತೇನೆ. ನಾನು ಚಿಮ್ಮಿಯ ಮಗಳು ಫೋನ್ ಮಾಡಿದಾಗ ಬೆಂಗಳೂರಿನಲ್ಲಿ ಇದ್ದೆ. ನಾನು ಬೆಂಗಳೂರಿನಿಂದ ಮೈಸೂರಿಗೆ ಬಂದು ಚಿಮ್ಮಿಯನ್ನು ದಾಖಲು ಮಾಡಿದ್ದ

ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋಗಿದ್ದೆ. ನಾನು ನೋಡಿದಾಗ ಚಿಮ್ಮಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಚಿಮ್ಮಿಯ ಜೊತೆ ಕುಳಿಯ ಹಾಗೂ ಚಿಮ್ಮಿಯ ಮಗಳು ಇದ್ದರು. ನಾನು ಚಿಮ್ಮಿಯ ಮಗಳು ಬೇಬಿ ಹಾಗೂ ಕುಳಿಯ ರವರ ಬಳಿ ಏನಾಯಿತು ಎಂದು ವಿಚಾರಿಸಿದಾಗ ಅವರು ನನ್ನ ಬಳಿ ಮಂಜು ಹಾಗೂ ಸುಬ್ರಮಣಿ ಚಿಮ್ಮಿ ವಾಸವಾಗಿದ್ದ ಲೈನ್ ಮನೆಗೆ ಬಂದು ಆಕೆಯನ್ನು ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದು ಆಕೆ ಪ್ರತಿಭಟಿಸಿದಾಗ ಅವರು ಆಕೆಯ ಕುತ್ತಿಗೆಯನ್ನು ಮಚ್ಚಿನಿಂದ ಕತ್ತರಿಸಿದ್ದಾರೆ ಎಂದು ಹೇಳಿರುತ್ತಾರೆ. ಬೇಬಿ ಹಾಗೂ ಕುಳಿಯರವರಿಗೆ ಈ ವಿಷಯವನ್ನು ಚಿಮ್ಮಿ ಹೇಳಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಚಿಮ್ಮಿಯವರ ಸ್ಥಿತಿ ಗಂಭೀರವಾಗಿದ್ದ ಕಾರಣ ಅವರನ್ನು ತೀವ್ರ ನಿಗಾ ಘಟಕದಲ್ಲಿ ಇಟ್ಟಿದ್ದರು ಹಾಗೂ ನಂತರ ಚಿಮ್ಮಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.

2. ಚಿಮ್ಮಿಯ ಮೃತ ದೇಹವನ್ನು ನಾನು ನೋಡಿದ್ದೆ. ಆಕೆಯ ಮೈಮೇಲೆ ನೈಟಿ ಇತ್ತು. ಆ ನೈಟಿಗೆ ರಕ್ತದ ಕಲೆಗಳು ಆಗಿತ್ತು. ಪೊಲೀಸರು ಆ ನೈಟಿಯನ್ನು ಜಪ್ತು ಮಾಡಿ ಫೋಟೋ ತೆಗೆದಿದ್ದರು. ಆಗ ಒಂದು ಬರವಣಿಗೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡರು. ಆಗ ನಾನು, ಚಿಮ್ಮಿಯ ಮಗಳು ಬೇಬಿ ಹಾಗೂ ಚಿಮ್ಮಿಯ ಗಂಡ ಕುಳಿಯ ಇದ್ದೆವು. ಈಗ ತೋರಿಸಿದ ನೋಟೀಸಿನಲ್ಲಿ ನಾನು ಸಹಿ ಮಾಡಿದ್ದೆ. ಸದರಿ ನೋಟೀಸನ್ನು ನಿಪಿ 33 ಎಂದು ಸಾಕ್ಷಿಯ ಸಹಿಯನ್ನು ನಿಪಿ 33(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನೈಟಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 3 ಎಂದು ಗುರುತಿಸಲಾಗಿದೆ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ಚಿಮ್ಮಿಯ ಮೃತದೇಹ ಕಾಣಿಸುತ್ತಿದೆ. ಅವುಗಳನ್ನು ಈಗಾಗಲೇ ನಿಪಿ 2 ಮತ್ತು 3 ಎಂದು ಗುರುತಿಸಲಾಗಿದೆ. ನಮ್ಮ ತೋಟದ ಬಳಿ ರಸ್ತೆಯ ರಿಪೇರಿ ಕೆಲಸ ನಡೆಯುತ್ತಿದ್ದು, ರಸ್ತೆಯ ಕೆಲಸ ಮಾಡುತ್ತಿದ್ದವರಿಗೆ ಉಳಿದುಕೊಳ್ಳಲು ಜಾಗ ಇಲ್ಲದಿದ್ದ ಕಾರಣ ನನ್ನ ತಂದೆಯ ಬಳಿ ಕೇಳಿದಾಗ ಅವರು ರಸ್ತೆಯ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೆ ಉಳಿದುಕೊಳ್ಳಲು ನಮ್ಮ ಲೈನ್ ಮನೆಯ ಒಂದು

ಪೋರ್ಷನ್ ನಲ್ಲಿ ಅವಕಾಶ ನೀಡಿರುತ್ತಾರೆ. ಚಿಮ್ಮಿ ಹಾಗೂ ಕುಳಿಯರವರು ವಾಸವಾಗಿದ್ದ ಲೈನ್ ಮನೆ ಪಕ್ಕದಲ್ಲೇ ರಸ್ತೆಯ ಕೆಲಸ ಮಾಡುತ್ತಿದ್ದ ಕೆಲಸದವರು ವಾಸವಾಗಿದ್ದರು. ರಸ್ತೆಯ ಕೆಲಸ ಮಾಡುತ್ತಿದ್ದರು ಮೈಲಸ್ವಾಮಿ ಕಡೆಯವರು. ಆರೋಪಿಗಳು ಚಿಮ್ಮಿಯ ಕೊಲೆ ಮಾಡಿದ್ದಾರೆ ಎಂದು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರಿಂದ ಗೊತ್ತಾಯಿತು. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿದ್ದೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ**

3. ನನ್ನ ತಂದೆ ಪೂಣಚ್ಚ ಅವರು ಜೀವಂತ ಇದ್ದಾರೆ. ಅವರು ಈಗ ಮೈಸೂರಿನಲ್ಲಿ ವಾಸವಾಗಿದ್ದಾರೆ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನಾನು 2-3 ವರ್ಷಗಳಿಂದ ಬೆಂಗಳೂರಿನಲ್ಲೇ ವಾಸವಾಗಿದ್ದೇನೆ ಎಂದರೆ ಸರಿ. ನಮ್ಮ ತೋಟದ ವ್ಯವಹಾರವನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಿಮ್ಮ ತೋಟದ ಲೈನ್ ಮನೆಯಲ್ಲಿ ಯಾರು ಯಾರು ಇದ್ದರು ಅನ್ನುವ ಬಗ್ಗೆ ನಿಮ್ಮ ತಂದೆಯವರಿಗೆ ಮಾತ್ರ ಗೊತ್ತಿತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ ತಂದೆಯವರಿಗೂ ಗೊತ್ತು ಹಾಗೂ ನನಗೂ ಕೂಡ ಗೊತ್ತು. ರಸ್ತೆಯ ಕೆಲಸ ಮಾಡುತ್ತಿದ್ದ ಕೆಲಸಗಾರರು ಲೈನ್ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮೈಲಸ್ವಾಮಿಯವರು ರಸ್ತೆಯ ಕೆಲಸ ಮಾಡುವ ಕಾಂಟ್ರಕ್ಟರ್ ಅವರು ಎಲ್ಲಿ ವಾಸವಾಗಿದ್ದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರ ಫೋನ್ ನಂಬರ್ ನನ್ನ ಬಳಿ ಇತ್ತು, ಈಗ ನನಗೆ ಅವರ ಫೋನ್ ನಂಬರ್ ನೆನಪಿಲ್ಲ. ಮೈಲಸ್ವಾಮಿಯ ಕಡೆಯವರು ಲೈನ್ ಮನೆಯ ಒಂದು ಪೋರ್ಷನ್ ನಲ್ಲಿ ವಾಸವಾಗಿದ್ದರು ಅವರು ಹೆಸರುಗಳು ನನಗೆ ನಿಖರವಾಗಿ ಗೊತ್ತಿಲ್ಲ. ಅವರು 4 ಜನ ವಾಸವಾಗಿದ್ದರು. 4 ಜನ ವಾಸವಾಗಿದ್ದರು ಎಂದು ನನಗೆ ಪೊಲೀಸರು ಹೇಳಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಬೇಬಿಯವರು ಚಾಸಾ 6 ರವರ ಮೊಬೈಲ್ ನಿಂದ ನನಗೆ ಫೋನ್ ಮಾಡಿದ್ದರು. ನನ್ನ ಫೋನ್ ನಂಬರ್ 9880985198 ಆಗಿರುತ್ತದೆ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೇಬಿಯವರು 2.03.2022 ರಂದು ಮಃ ಸುಮಾರು 3.00 ಗಂಟೆಯ ಸಮಯಕ್ಕೆ ಫೋನ್ ಮಾಡಿದ್ದರು. ನನಗೆ ಬೇಬಿಯವರು ಫೋನ್ ಮಾಡಿಲ್ಲ ಹಾಗೂ ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇಬಿ ಹಾಗೂ ಕುಳಿಯ ಆರೋಪಿಗಳ ಹೆಸರನ್ನು ನನಗೆ ಹೇಳಿಯೇ ಇಲ್ಲ ಹಾಗೂ ಇದೇ ಮೊದಲ ಬಾರಿಗೆ ಬೇಬಿ ಹಾಗೂ ಕುಳಿಯ ಆರೋಪಿಗಳ ಹೆಸರನ್ನು ನನ್ನ ಬಳಿ ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಮಹಜರು ಮಾಡಿದಾಗ ನಾನು, ಕುಳಿಯ, ಬೇಬಿ, ಆಸ್ಪತ್ರೆಯ ಸಿಬ್ಬಂದಿ ಹಾಗೂ ಪೊಲೀಸರು ಇದ್ದೆವು. ನಿಪಿ 4 ಮಹಜರನ್ನು ಆಸ್ಪತ್ರೆಯಲ್ಲಿ ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ನಿಪಿ 4 ಮಹಜರನ್ನು ಆಸ್ಪತ್ರೆಯಲ್ಲಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಕೂಡ ನನಗೆ ತೊಂದರೆ ಆಗಬಹುದು ಎಂದು ತಿಳಿದು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)